ನಮ್ಮ ಸಂಯುಕ್ತ ರಾಷ್ಟ್ರ ವ್ಯವಸ್ಥೆಯಲ್ಲಿ, ರಾಜ್ಯಗಳಲ್ಲಿ ಮತ್ತು ಕೇಂದ್ರದಲ್ಲಿ ಒಂದೇ ರಾಜಕೀಯ ಪಕ್ಷದ ಸರ್ಕಾರಗಳು ಇರಬೇಕೆಂದೇನೂ ಇಲ್ಲ. ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರವು ವಿಭಿನ್ನ ರಾಜಕೀಯ ಪಕ್ಷಗಳಿಗೆ ಸೇರಿದ ಸರ್ಕಾರಗಳಾಗಿದ್ದರೂ ಅವುಗಳ ನಡುವೆ ಪರಸ್ಪರ ಸಹಕಾರ ಮತ್ತು ತಿಳಿವಳಿಕೆ ಅಪೇಕ್ಷಣೀಯ ಹಾಗೂ ಕಾರ್ಯಸಾಧ್ಯ, ಜನತಾ ಸೇವೆಯ ಮೂಲಭೂತ ಧ್ಯೇಯ ಸಾಧನೆಯ ಮಹತ್ಕಾರ್ಯದಲ್ಲಿ ನನ್ನ ಸರ್ಕಾರ ಕೇಂದ್ರ ಸರ್ಕಾರದ ಸಹಕಾರವನ್ನು ಕೋರುತ್ತದೆ.

ವಿಧಾನಮಂಡಲದ ಹಿಂದಿನ ಅಧಿವೇಶನದ ತರುವಾಯ ಉದ್ಘೋಷಿಸಲಾದ ಅಧ್ಯಾದೇಶಗಳ ಬದಲಾಗಿ ವಿಧೇಯಕಗಳನ್ನು ಮತ್ತು ಸರ್ಕಾರವು ಅವಶ್ಯವೆಂದು ಭಾವಿಸುವ ವಿಧೇಯಕಗಳನ್ನು ತಮ್ಮ ಪರ್ಯಾಲೋಚನೆಗಾಗಿ ಮಂಡಿಸಲಾಗುವುದು.

ನಾನು ಕಳೆದ ಸುಮಾರು ಐನೂವರೆ ವರ್ಷಗಳಿಂದ ಕರ್ನಾಟಕದಲ್ಲಿ ಇದ್ದೇನೆ, ಅನತಿ ಕಾಲದಲ್ಲಿ ನಾನು ದಿಲ್ಲಿಗೆ ಮರಳಬಹುದು. ನನ್ನ ಅಧಿಕಾರಾವಧಿಯಲ್ಲಿ ಕರ್ನಾಟಕದ ಸಮಸ್ತ ಜನತೆ ನನಗೆ ಅಪಾರ ಪ್ರೀತಿವಾತ್ಸಲ್ಯಗಳನ್ನು ತೋರಿದ್ದಾರೆ. ನಾನು ಹಾಗೂ ನನ್ನ ಪತ್ನಿಯು ನಮ್ಮಲ್ಲಿನ ವಾಸ್ತವ್ಯದ ಸವಿ ನೆನಪುಗಳನ್ನು ಎಂದೂ ಮರೆಯುವಂತಿಲ್ಲ. ಕರ್ನಾಟಕ ಜನತೆಯ ಸೇವೆಯೇ ನನ್ನ ಪ್ರಥಮ ಕರ್ತವ್ಯ ವಾಗಿತ್ತು. ಕರ್ನಾಟಕ ಜನತೆಯ ಸಮಸ್ಯೆಗಳ ವಿಚಾರದಲ್ಲಿ ನಾವು ಭಾಗಿಗಳಾಗಿದ್ದ ಕಾರಣ ನಮಗೆ ತುಂಬ ಸಂತೃಪ್ತಿಯುಂಟಾಗಿದೆ. ಕರ್ನಾಟಕ ವಿಧಾನಮಂಡಲದ ಹಿಂದಿನ ಮತ್ತು ಇಂದಿನ ಮಾನ್ಯ ಸದಸ್ಯರು ನನ್ನ ಅಧಿಕಾರಾವಧಿಯ ಕಾಲದಲ್ಲಿ ನನಗೆ ನೀಡಿದ ಸಹಕಾರ, ನನಗೆ ತೋರಿದ ಗೌರವ ಹಾಗೂ ವಾತ್ಸಲ್ಯಗಳ ಬಗ್ಗೆ ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ನಿಮಗೂ, ಕರ್ನಾಟಕದ ಸಮಸ್ತ ಜನತೆಗೂ ಈ ಸಂದರ್ಭದಲ್ಲಿ ನಾನು ಮತ್ತೊಮ್ಮೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕರ್ನಾಟಕ ರಾಜ್ಯವು ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದೂ ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳು ತ್ವರಿತವಾಗಿ ಮುನ್ನಡೆಯಲೆಂದೂ, ತಸ್ಫೂಲಕ ರಾಜ್ಯದ ಜನತೆಯ, ವಿಶೇಷತಃ ಬಡವರ, ಸಮಾಜದ ದೀನ ದಲಿತರ ಆಶೋತ್ತರಗಳು ಈಡೇರಲೆಂದೂ ನಮ್ಮ ನಿರಂತರ ಬಯಕೆ. ದೇವರು ನಮ್ಮ ಕಾರ್ಯಕಲಾಪಗಳಲ್ಲಿ ನಮಗೆ ಮಾರ್ಗದರ್ಶನ ನೀಡಲಿ.

"ಜೈ ಹಿಂದ್"

(ಸಭೆಯು ಬೆ ಗಂಟೆ ೪೦ ನಿಮಿಷಕ್ಕೆ ಪುನಃ ಸೇರಿತು)

[ಶ್ರೀ ಡಿ. ಬಿ. ಚಂದ್ರೇಗೌಡ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು]

ಅಧ್ಯಕ್ಷರು.—ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಕಾರ್ಯದರ್ಶಿಯವರು ಸಭೆಯ ಮುಂದಿಡುವರು.

Secretary's Report

SECRETARY, LEGISLATURE.—Sir, I lay on the Table of the House a copy of the Address delivered by the Governor.

I also lay on the Table a List of Bills which have received the assent of the Governor or the President as the case may be, subsequent to the last report. *

* Annexure.

ANNEXURE

Statement showing the Bills assented to by the Governor or the President.

Sl. No.	Name of the Bill	Date of Assent	Assented by
1.	The Karnataka State Universities (Amendment) Bill, 1982	13-7-1982	Governor
2.	The Karnataka Excise (Amendment) Bill, 1982	1-9-1982	Governor
3.	The Karnataka Bhoodan Yagna (Repeal) Bill, 1982	2-9-1982	Governor
4.	The Karnataka Shops and Commercial Establishment Bill, 1982	2-9-1982	Governor
5.	The Karnataka Appropriation (No. 7) Bill, 1982	13-11-1982	Governor

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಉಳಿದ ವಿಷಯಗಳ ಬಗ್ಗೆ ನಾಳೆ ಚರ್ಚೆ ಮಾಡ ಬೇಕಾಗಿರುವುದರಿಂದ, ನಾಳೆ ಬೆಳಿಗ್ಗೆ ೯ ಗಂಟೆಗೆ ಸಭೆಯನ್ನು ಮುಂದೂಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಇಂದಿನ ಸಭೆಯ ಕಾರ್ಯಕಲಾಪಗಳು ಮುಗಿದಿವೆ. ಸಭೆಯು ಈ ದಿವಸಕ್ಕೆ ಮುಂಗಿದಂ ನಾಳೆ ಬೆಳಿಗ್ಗೆ ೯-೦೦ ಗಂಟೆಗೆ ಸೇರುತ್ತದೆ.

[ಸಭೆಯು ೫ ಗಂಟೆ ೪೫ ನಿಮಿಷಕ್ಕೆ ಮುಂಕ್ತಾಯವಾಗಿ, ಪುನಃ ಮಂಗಳವಾರ, ದಿನಾಂಕ ೨೫ನೇ ಜನವರಿ ಮಾಹೆ ೧೯೮೩ರ ಬೆಳಿಗ್ಗೆ ೯ ಗಂಟೆಗೆ ಸೇರಲು ನಿಶ್ಚಯಿಸಲಾಯಿತು.]